# ಜ್ಞಾನಶಕ್ತಿ

## ಮಾಸ ಪತ್ರಿಕೆ

## JNANASHAKTHI



### ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

ಸಂಪುಟ - 14 Reg. No. : KARBIL / 2005 / 16123 ಸೆಪ್ಟೆಂಬರ್ - 2025 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 09 ಪ್ರಕಟಣೆ : 20-09-2025

# ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ಶೃಂಗೇರಿ ಯಾತ್ರೆ



ಚಿತ್ರ : ರಘುವೀರ್ ಪೆರ್ಡೂರು

ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ಅಧ್ಯಕ್ಷರಾದ ಡಾ| ಎ. ಪಿ. ಕೃಷ್ಣ ಇವರ ನೇತೃತ್ವದಲ್ಲಿ ಜಗದ್ಗುರುಗಳ ಚಾತುರ್ಮಾಸ್ಯ ಪ್ರಯುಕ್ತ ಸಮಾಜದ 60ಕ್ಕೂ ಹೆಚ್ಚು ಸದಸ್ಯರು ತಾ. 24-08-2025ರಂದು ಶೃಂಗೇರಿಗೆ ತೆರಳಿ ಹೊರೆಕಾಣಿಕೆ ಸಮರ್ಪಿಸಿದರು.

ಜಗದ್ಗುರುಗಳಿಂದ ಅನುಗ್ರಹ ಭಾಷಣ ಆಲಿಸಿ, ಫಲಮಂತ್ರಾಕ್ಷತೆ ಸ್ವೀಕರಿಸಿ ಕೃತಾರ್ಥರಾದರು.

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಋಗುಪಾಕರ್ಮ



ಚಿತ್ರ : ರಘುವೀರ್ ಪೆರ್ಡೂರು

ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ. 5-9-2025ನೇ ಶುಕ್ರವಾರ 'ಉಪಾಕರ್ಮ' ನಡೆಯಿತು. ವೇದಮೂರ್ತಿ ಪಾವಂಜೆ ಜಗದೀಶ್ ಉಪಾಧ್ಯಾಯರು ತಮ್ಮ ಸಹೋದರರೊಂದಿಗೆ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಿದರು.

ಶ್ರೀ ಸಭಾ ಅಧ್ಯಕ್ಷ ಡಾ| ಎ. ಪಿ. ಕೃಷ್ಣ ಇವರು ಸೇರಿದಂತೆ 90ಕ್ಕೂ ಹೆಚ್ಚು ಸದಸ್ಯರು ಭಾಗವಹಿಸಿದ್ದರು.



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು



'ಶ್ರೀ ಸುಬ್ರಹ್ಮಣ್ಯ ಸಭಾ'ದಲ್ಲಿ

ತಾ. 05-10-2025ನೇ ಆದಿತ್ಯವಾರ

**'ನಾಡಹಬ್ಬ'** ವನ್ನು



ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುವುದು.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತೇವೆ.

ಅಧ್ಯಕ್ಷರು ಮತ್ತು ಸರ್ವ ಸದಸ್ಯರು
ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರು ಸಂಪರ್ಕಿಸಿ

ಶ್ರೀಮತಿ ಜಯಂತಿ ವಿನೋದ್ ರಾವ್ : 9945742680
ಶ್ರೀಮತಿ ಶಕುಂತಲಾ ವಿಜಯಕುಮಾರ್ : 9481973204
ಶ್ರೀ ಜನಕರಾಜ್ : 8494939446
ಶ್ರೀ ರಾಕೇಶ್ ಕುಡುಪು : 9741041458

## ಕಾರ್ಯಕ್ರಮಗಳು

ಬೆಳಗ್ಗೆ 7-30ರಿಂದ 8-30 : ವಿವಿಧ ಪಾರಾಯಣಗಳು
ಬೆಳಗ್ಗೆ 8-30ರಿಂದ : ಉಪಾಹಾರ
ಬೆಳಗ್ಗೆ 9-00ರಿಂದ : **ಶ್ರೀ ಲಲಿತಾ ಸಹಸ್ರನಾಮ ಪಾರಾಯಣ**



10-00ರಿಂದ 11-30 : **ಸುಗಮ ಸಂಗೀತ** (ಜಾನಪದ ಗೀತೆ, ಭಾವಗೀತೆ) **ಸ್ಪರ್ಧೆ**
ವಿಭಾಗ 1 : 5 ವರ್ಷದಿಂದ 15 ವರ್ಷದ ವರೆಗೆ
ವಿಭಾಗ 2 : 16 ವರ್ಷದಿಂದ 50 ವರ್ಷದ ವರೆಗೆ
ವಿಭಾಗ 3 : 51ರಿಂದ ಮೇಲ್ಪಟ್ಟವರಿಗೆ



10-30ರಿಂದ 11-30 : **ಚಿತ್ರ ಬಿಡಿಸುವ ಸ್ಪರ್ಧೆ**
ವಿಭಾಗ 1 : 1ನೇ ತರಗತಿಯಿಂದ 5ನೇ ತರಗತಿ
ವಿಭಾಗ 2 : 6ನೇ ತರಗತಿಯಿಂದ 10ನೇ ತರಗತಿ

11-30ರಿಂದ 12-00 : **ಹುಲಿ ಕುಣಿತ ಸ್ಪರ್ಧೆ**
ವಿಭಾಗ 1 : 16 ವರ್ಷದಿಂದ ಕೆಳಗಿನ ಮಕ್ಕಳ ವಿಭಾಗ
ವಿಭಾಗ 2 : ಮಹಿಳಾ ವಿಭಾಗ
ವಿಭಾಗ 3 : ಪುರುಷರ ವಿಭಾಗ





12-00ರಿಂದ : **ಸನ್ಮಾನ** : ಬಾಲಪ್ರತಿಭೆ ಮಾಸ್ಟರ್ ಋಷಭ್ ರಾವ್
ಪ್ರಥಮ ಸ್ಥಾನ, ಅಂತರ್ರಾಷ್ಟ್ರೀಯ ಮಟ್ಟದ ಫ್ಯಾಷನ್ ಶೋ ಹಾಗೂ ಸೂಪರ್ ಟ್ಯಾಲೆಂಟ್‌ಶೋ ಪ್ರಶಸ್ತಿ

12-15ರಿಂದ 1-00 : **ಪ್ರತಿಭಾ ಪುರಸ್ಕಾರ**
ದಿ| ಕೆ. ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ, ಕುಳ್ಯಾ ಇವರಿಂದ
ನಿರ್ವಹಣೆ : ಶ್ರೀ ಕೆ. ಸದಾಶಿವ ಶಾಸ್ತ್ರಿ

ಮಧ್ಯಾಹ್ನ 1-00ರಿಂದ : ಭೋಜನ



2-00ರಿಂದ : ಯಕ್ಷಗಾನ – ಪ್ರಸಂಗ : **'ನರಕಾಸುರ ಮೋಕ್ಷ'**
ನಿರ್ದೇಶನ : ಶ್ರೀ ಸಂಜಯ್ ಕುಮಾರ್ ಫಲಿಮಾರ್
ಪ್ರಾಯೋಜಕರು : ಶ್ರೀ ಕೆ. ಸದಾಶಿವ ಶಾಸ್ತ್ರಿ



ಬಹುಮಾನಗಳ ಪ್ರಾಯೋಜಕರು : ಡಾ| ಜಯಲಕ್ಷ್ಮೀ

ಸಂಜೆ 5-00ರಿಂದ : ಬಹುಮಾನ ವಿತರಣೆ, ಧನ್ಯವಾದ, ರಾಷ್ಟ್ರಗೀತೆ

# ಜ್ಞಾನಶಕ್ತಿ ಮಾಸಪತ್ರಿಕೆ

ಪ್ರಧಾನ ಸಂಪಾದಕರು : ಎಂ. ಎಸ್. ರಘುನಾಥ ರಾವ್ ಪುತ್ತೂರು 9448481696

ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618

ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ

• ರಘುವೀರ್ ಪೆರ್ಡೂರು • ಟಿ.ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :

• ಉದಯ ಕುಮಾರ್ ಪಿ. • ಸಂತೋಷ್ ಕುಮಾರ್ ಯು.

• ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು : • ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಡಾ. ಎ. ಪಿ. ಕೃಷ್ಣ

: 7795116598 : 9343361618 e-mail : jnanashakthisss@gmail.com





॥ ಶ್ರೀ ರಾಜರಾಜೇಶ್ವರೀ ಪ್ರಸನ್ನಾ ॥

॥ ಶ್ರೀ ಗುರುಭ್ಯೋ ನಮಃ ॥

**ಮರದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ**

**ಕೋಡಿಂಬಾಡಿ, ಪುತ್ತೂರು - 574 325, ದ. ಕ.**

ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಹಾಗೂ ತತ್ಕರಕಮಲಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಪರಮಾನುಗ್ರಹದಿಂದ

**ದಿನಾಂಕ 22-09-2025ರಿಂದ 02-10-2025ರ ವರೆಗೆ**

**ಶರನ್ನವರಾತ್ರ ಉತ್ಸವ ಹಾಗೂ ಶ್ರೀ ಚಂಡಿಕಾ ಹೋಮ**

ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರೀ ಇವರ ಮಾರ್ಗದರ್ಶನದಲ್ಲಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿರುವುದು.

ಭಕ್ತಾದಿಗಳಿಗೆ ಆದರದ ಸ್ವಾಗತ ಬಯಸುವ

**ಆಡಳಿತ ಮಂಡಳಿ**



**PREETHIKA AUTOMOBILES**

2493633
9845851573

*Wholesale & Retail Dealers in :*

***2 & 3 WHEELERS, SPARES & ACCESSORIES***

**KARANGALPADY, MANGALORE - 575 003**

***Dealers in :***

**Minda Switches, M. K. Products, Swiss Auto Products, Power Coils**



ಪತ್ರಿಕೆಗೆ ಶುಭ ಬಯಸುವ–

**ಡಾ. ದಿವಾಕರ್ ರಾವ್** ಹಾಗೂ

**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**

ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ

ಕದ್ರಿ, ಮಂಗಳೂರು - 575 003



ಪತ್ರಿಕೆಗೆ ಶುಭ ಬಯಸುವ–

**Dr. Jayalakshmi Devi**

**Dr. Jaganmohan, Smt. Asha Mohan**

**Akarsh M. Rao**

**Konchadi, Mangalore - 575 008**


## ಲಯನ್ಸ್ ಜಿಲ್ಲಾ 317 ಡಿ ಇದರ ಪ್ರಶಸ್ತಿಪ್ರದಾನ ಕಾರ್ಯಕ್ರಮ




ಲಯನ್ಸ್ ಜಿಲ್ಲಾ 317 ಡಿ ಇದರ ಪ್ರಶಸ್ತಿ ಪ್ರದಾನ ಕಾರ್ಯಕ್ರಮವು 20ನೇ ಭಾನುವಾರ ಸಂಜೆ ನಡೆಯಿತು. ಇದರಲ್ಲಿ 'ತನಿಕ' 2024 – 2025ರ ಪ್ರಶಸ್ತಿಯನ್ನು ಶ್ರೀ ಹರ್ಷಕುಮಾರ್ ಕೇದಿಗೆ ಮತ್ತು ಶ್ರೀಮತಿ ಕನಕವಲ್ಲಿ ಎಚ್. ಕೇದಿಗೆ ಇವರಿಗೆ 'Best District Chairperson' ಪ್ರಶಸ್ತಿಯನ್ನು ಜಿಲ್ಲಾ ಲಯನ್ಸ್ ಗವರ್ನರ್ ಲಯನೆಸ್ ಶ್ರೀಮತಿ ಬಿ. ಎಂ. ಭಾರತಿಯವರು ಪ್ರದಾನ ಮಾಡಿದರು. ಇವರು ಹಲವಾರು ಕ್ಷೇತ್ರಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಗುರುತಿಸಿ, ಈ ಪ್ರಶಸ್ತಿಯನ್ನು ನೀಡಲಾಯಿತು. ಇವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅಭಿನಂದನೆಗಳು.

## ಪುತ್ತೂರಿನಲ್ಲಿ ಸುಸಜ್ಜಿತ 'ಶಿವಸದನ'

### ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯ

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ದಲ್ಲಿ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯವಿದ್ದು, ಹಿರಿಯ ನಾಗರಿಕರ ವಸತಿನಿಲಯದಲ್ಲಿ 45ಕ್ಕೂ ಹೆಚ್ಚು ನಿವಾಸಿಗಳಿದ್ದು, ಇದೀಗ ವಿಕಲಚೇತನರ ವಿಶೇಷ ಶಾಲೆಗೆ (Day Care) ಮಕ್ಕಳ ದಾಖಲಾತಿ ಆರಂಭವಾಗಿದೆ. ನುರಿತ ಶಿಕ್ಷಕರಿಂದ ಇವರಿಗೆ ಹಲವಾರು ಚಟುವಟಿಕೆ, ಆಟ, ಪಾಠ, ಆರೈಕೆಗಳನ್ನು ಮಿತದರದಲ್ಲಿ ಒದಗಿಸಲಾಗುತ್ತಿದೆ. 25 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಸುಸಜ್ಜಿತ ವಸತಿನಿಲಯದಲ್ಲಿ ಉಳಿದುಕೊಳ್ಳಲು ಹಾಗೂ ಸಣ್ಣ ಮಕ್ಕಳಿಗೆ ಬೆಳಗ್ಗೆ 7–00ರಿಂದ ಸಂಜೆ ಗಂಟೆ 7–00ರ ವರೆಗೆ ನೋಡಿಕೊಳ್ಳುವ (Day Care) ವ್ಯವಸ್ಥೆ ಇದೆ. ಆವಶ್ಯಕತೆ ಇರುವವರಿಗೆ ಈ ಮಾಹಿತಿ ಹಂಚಿಕೊಳ್ಳಲು ವಿನಂತಿಸುತ್ತೇವೆ ಮತ್ತು ನಿಮ್ಮ ಎಲ್ಲಾ whatsapp ಗ್ರೂಪ್‌ಗಳಿಗೆ ಈ ಮಾಹಿತಿ ತಲುಪಿಸಲು ವಿನಂತಿ.

**ಹೆಚ್ಚಿನ ಮಾಹಿತಿಗಾಗಿ**

ಶ್ರೀ ಕರುಣ್ ರಾವ್ ಬೆಳ್ಳೆ – 7337634359

ಶ್ರೀಮತಿ ಸುಮಂಗಲಾ ಪ್ರಭಾಕರ್ – 9844242442

ಶ್ರೀ ಪಿ. ಶ್ರೀಕಾಂತ್ ರಾವ್ – 7795116598


ಪತ್ರಿಕೆಗೆ ಶುಭ ಬಯಸುವ–

**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು**

**ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ**

**ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**





*Freelance Makeup & Hairstyle Artistry*

*Swapna_rao_makeoverartistry*

**BRIDAL / PRE / POST WEDDING FUNCTIONS / OTHER PERSONAL EVENTS & PARTIES**

**Rental Jewellery / Saree Pre-pleating Service available**

**For Bookings and Enquiries**

*Swapna Vallish* : 9972465209 / 7892235761



ಪತ್ರಿಕೆಗೆ ಶುಭ ಬಯಸುವ –

**ಕೆ. ಆರ್. ಉಪಾಧ್ಯಾಯ**

**ಮಂಗಳೂರು**

## ಮೂಡುಬಿದಿರೆ ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತು (ರಿ.) ಇದರ 34ನೇ ವಾರ್ಷಿಕ ಸಭೆ



ಮೂಡುಬಿದಿರೆ ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತು (ರಿ.) ಇದರ 34ನೇ ವಾರ್ಷಿಕ ಸಭೆ, ಸೋಣ ಸಂಭ್ರಮ, ಸಾಂಸ್ಕೃತಿಕ ಕಾರ್ಯಕ್ರಮ ತಾ. 7–9–2025ನೇ ರವಿವಾರ ಅಲಂಗಾರ್ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಎಂ. ದೇವಾನಂದ ಭಟ್ ಅವರ ಅಧ್ಯಕ್ಷತೆಯಲ್ಲಿ ವೇದಮೂರ್ತಿ ವಾಗೀಶ ಶಾಸ್ತ್ರಿಗಳ ಅಮೃತಹಸ್ತದಿಂದ ಉದ್ಘಾಟನೆಗೊಂಡಿತು. ಮಂಗಳೂರು ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಡಾ। ಎ. ಪಿ. ಕೃಷ್ಣ, ಧರ್ಮಸ್ಥಳ ಕ್ಷೇತ್ರದ ಪಾರುಪತ್ಯಗಾರರು ಶ್ರೀ ಲಕ್ಷ್ಮೀನಾರಾಯಣ ರಾವ್, ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಕಾರ್ಯದರ್ಶಿ ನಿಟ್ಟೆ ಶ್ರೀ ಮುರಳೀಧರ್ ಶರ್ಮಾ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಜಂಟಿ ಕಾರ್ಯದರ್ಶಿ ಕುಂಭಾಶಿ ಶ್ರೀ ಗಣೇಶ್ ರಾವ್, ಆದಿಶಂಕರ ಮಹಿಳಾ ಸಂಘದ ಅಧ್ಯಕ್ಷೆ ಶ್ರೀಮತಿ ಜ್ಯೋತಿ ಜೆ. ರಾವ್ ಉಪಸ್ಥಿತರಿದ್ದ ವೇದಿಕೆಯಲ್ಲಿ ಸಮಾಜದ ಹಿರಿಯರಾದ ಕಟೀಲ್ ಸಿಥ್ಲಾ ಶ್ರೀಮತಿ ಗಂಗಾ ಜಿ. ರಾವ್ ಹಾಗೂ ಶ್ರೀ ಜಗದೀಶ್ ರಾವ್ ಮಕ್ಕಿ ಇವರನ್ನು ಗಣ್ಯರ ಸಮಕ್ಷಮ ಸಮ್ಮಾನಿಸಲಾಯಿತು. ಅಲ್ಲದೆ ಶ್ರೀಮತಿ ದೀಪ್ತಿ ರಾವ್ (ಆಯುರ್ವೇದ ಎಂ.ಡಿ., ವಿ. ವಿ. ಮಟ್ಟದ ಅಂಕ) ಕುಮಾರಿ ಪ್ರಣವಿ ರಾವ್ (ದ್ವಿತೀಯ ಪಿಯುಸಿ ರಾಜ್ಯಮಟ್ಟದ 10ನೇ ಅಂಕ) ಕುಮಾರಿ ಸಾನಿಧ್ಯ ರಾವ್ (ಎಸ್.ಎಸ್.ಎಲ್.ಸಿ. ರಾಜ್ಯಮಟ್ಟದಲ್ಲಿ 1ನೇ ಅಂಕ) ವಿದ್ಯಾರ್ಥಿಗಳ ಸಾಧನೆಗಾಗಿ ಗೌರವಿಸಲಾಯಿತು. ಶೇಕಡಾ 75ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು 'ವಿದ್ಯಾರ್ಥಿನಿಧಿ' ನೀಡಿ ಪುರಸ್ಕರಿಸಲಾಯಿತು. ಮೂಡುಬಿದಿರೆ, ಕಟೀಲ್, ಶಿರ್ತಾಡಿ ವಲಯದ ಸಾಮಾನ್ಯ 100ಕ್ಕೂ ಮಿಕ್ಕ ನಮ್ಮ ಸಮಾಜದ ಬಂಧುಗಳ ವಿಳಾಸ ಪುಸ್ತಕವನ್ನು ಶ್ರೀ ದೇವಾನಂದ ಭಟ್ ಪ್ರಾಯೋಜಿಸಿ ಈ ಸಭೆಯಲ್ಲಿ ಬಿಡುಗಡೆ ಗೊಳಿಸಲಾಯಿತು. ಪರಿಷತ್ತಿನ ಸಂಚಾಲಕರಾದ ಅಲಂಗಾರ್ ಶ್ರೀ ಜಯರಾಮ್ ರಾವ್ ಕಾರ್ಯಕ್ರಮದ ನಿರೂಪಣೆ ಮಾಡಿದರು, ಕಾರ್ಯದರ್ಶಿ ಶ್ರೀ ಸುರೇಶ್ ರಾವ್ ವಾರ್ಷಿಕ ವರದಿವಾಚಿಸಿದರು. ಖಜಾಂಚಿಯವರಾದ ಶ್ರೀ ವಸಂತ್‌ರಾಜ್ ಬಿ.ಕೆ. ವಾರ್ಷಿಕ ಲೆಕ್ಕಪತ್ರವನ್ನು ಮಂಡಿಸಿದರು. ಕಟೀಲ್ ಶ್ರೀ ಮಂಜುನಾಥ್ ರಾವ್ ಧನ್ಯವಾದ ನೀಡಿದ ಬಳಿಕ ಪರಿಷತ್ತು ಸದಸ್ಯರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ 'ಏಕಾದಶಿ ದೇವಿ ಮಹಾತ್ಮೆ' ಯಕ್ಷಗಾನ ಪ್ರದರ್ಶನ ನೆರವೇರಿತು. ಸಮಾಜದ ಬಂಧುಗಳು ಸ್ವತಃ ಮನೆಯಲ್ಲಿ ತಯಾರಿಸಿದ ವಿವಿಧ ಬಗೆಯ ಭಕ್ಷ್ಯಭೋಜ್ಯಗಳ ಭೋಜನದೊಂದಿಗೆ ಒಟ್ಟು ಕಾರ್ಯಕ್ರಮವು ಕಳೆಕಟ್ಟಿತು.

## ಕಂಪ್ಯೂಟರ್ ನಿಧಿಗೆ ಸಹಾಯಹಸ್ತ



ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ಮೂಲನಿಧಿಯಾಗಿ ರೂ. 1,10,000/– ನೀಡಿ 'ಕಂಪ್ಯೂಟರ್ ಶಿಕ್ಷಣ ನಿಧಿ'ಯನ್ನು ಸ್ಥಾಪಿಸಿದ್ದು, ಆ ನಿಧಿಯ ಮೊತ್ತವನ್ನು ಸಮಾಜ ಬಾಂಧವರ ನೆರವಿನಿಂದ ಕನಿಷ್ಠ ರೂ. 10 ಲಕ್ಷಕ್ಕೆ ಹೆಚ್ಚಿಸುವ ಉದ್ದೇಶವಿದ್ದು ಇಂತಹ ಸಮಾಜಮುಖೀ ಕಾರ್ಯಕ್ಕೆ ಸಹಕರಿಸಿದವರು.

| | | | |
|---|---|---|---|
| ಡಾ. ಜಯಲಕ್ಷ್ಮಿ ರಾವ್ | – | ರೂ. | 10,000/– |
| ಸಾಂತೂರು ಶ್ರೀ ಭಾಗ್ಯಚಂದ್ರ ರಾವ್ | – | ರೂ. | 1,00,000/– |
| ಶ್ರೀಮತಿ ಸುಮಂಗಲಾ ಪ್ರಭಾಕರ್ | – | ರೂ. | 10,000/– |
| ಶ್ರೀಮತಿ ರತ್ನ ರಾಜೇಂದ್ರ | – | ರೂ. | 5,000/– |
| ಶ್ರೀ ಶ್ರೀನಿವಾಸ ರಾವ್ ಮತ್ತು ಶ್ರೀಮತಿ ಪುಷ್ಪಾವತಿ | – | ರೂ. | 10,000/– |
| ಶ್ರೀಮತಿ ರತ್ನ ರಾಜೇಂದ್ರ | – | ರೂ. | 5,000/– |
| **ಬಾಕಿ ಉಳಿದ ಮೊತ್ತ** | : | ರೂ. | **7,50,000/–** |

ದಾನಿಗಳಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ವಂದನೆಗಳು


## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

'ಶ್ರೀ ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು - 575 003

**ಶಾಖೆಗಳು** ✆ : **9880968032 / 0824-2982095**

ಮಂಗಳೂರು : ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ ✆ : 0824 - 2491895 / 8861155454

ಪುತ್ತೂರು : ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ ✆ : 08251 - 235895 / 8123659955

ಬೆಳ್ತಂಗಡಿ : 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು) ✆ : 08256 - 234076 / 8867269944

ಸುರತ್ಕಲ್ : 'ಪೂವ ಆರ್ಕೇಡ್' ✆ : 0824 - 2477895 / 9611550803

ಕಾರ್ಕಳ : 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್ ✆ : 08258 - 235544 / 9980528800

ಸುಳ್ಯ : ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು ✆ : 08257 - 233895 / 8147539955

ಬಿ.ಸಿ. ರೋಡ್ : ಲಕ್ಷ್ಮೀ ಮಹಲ್ ✆ : 08255 - 233895 / 8792464344

ವಿಟ್ಲ : ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ ✆ : 08255 - 239895 / 8147469955

ಮೂಡಬಿದ್ರೆ : ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ ✆ : 08258 - 200161 / 8147549955

ಪದವಿನಂಗಡಿ : ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ ✆ : 9731405917

ಕುತ್ತಾರ್ : ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ ✆ : 8792034344

ಕಿನ್ನಿಗೋಳಿ : ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ ✆ : 8197677575

ಪಡೀಲ್ ಪುತ್ತೂರು : ವಿಜಯಲಕ್ಷ್ಮೀ ಕಾಂಪ್ಲೆಕ್ಸ್ ✆ : 9740775967

ಕೊಕ್ರಾಡಿ : ವೃದ್ಧಿ ಕಾಂಪ್ಲೆಕ್ಸ್, ಜಂತಿಗೋಳಿ ಕ್ರಾಸ್, ಬೆಳ್ತಂಗಡಿ ✆ : 9741443470

ಕುಂಜತ್‌ಬೈಲ್ : ನಮ್ರದೀಪ್ ಕಾಂಪ್ಲೆಕ್ಸ್, ಕೋಸ್ಟಲ್ ಗಾರ್ಡ್ ಎದುರು ✆ : 9740925733

ಕೋಡಿಕ್ಕಲ್ : ಸುಗಂಧಿ ಪರ್ಲ್ಸ್, ಮೈನ್ ರೋಡ್, 7th ಕ್ರಾಸ್, ಮಂಗಳೂರು ✆ : 9945916755

ಕುಲಶೇಖರ : ಅಕಯ್ದ ಕಾಂಪ್ಲೆಕ್ಸ್, ಶಕ್ತಿನಗರ ಅಡ್ಡ ರಸ್ತೆ ಲ್ಯೂಮಿನಸ್ ಅಪಾರ್ಟ್‌ಮೆಂಟ್ ಬಳಿ, ಪದವು, ಕುಲಶೇಖರ, ಮಂಗಳೂರು ✆ : 8904801404

ಮುಲ್ಕಿ : ಮಾತಾ ರೆಸಿಡೆನ್ಸಿ, ಹಳೆಯಂಗಡಿ, ಮುಲ್ಕಿ ✆ : 9980638274

### ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು

| ನಿರಖು ಠೇವಣಿ (F.D.) | | |
|---|---|---|
| 45 ದಿನಗಳಿಂದ 180 ದಿನಗಳ ವರೆಗೆ | - | 5% |
| 181 ದಿನಗಳಿಂದ 394 ದಿನಗಳ ವರೆಗೆ | - | 6% |
| 13 ತಿಂಗಳು ಮೇಲ್ಪಟ್ಟು | - | 9% |

ಹಿರಿಯ ನಾಗರಿಕರಿಗೆ, ಸಂಘ–ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**FIXED DEPOSIT**
ಠೇವಣಿಗಳ ಮೇಲೆ **9.5%**
ಹಿರಿಯ ನಾಗರಿಕರಿಗೆ 0.5% ಹೆಚ್ಚುವರಿ ಬಡ್ಡಿ
ಆಕರ್ಷಕ ಬಡ್ಡಿದರಗಳು

**ನಿಮ್ಮ ಹೂಡಿಕೆಗಳು ಕೇವಲ 88 ತಿಂಗಳಲ್ಲಿ ದ್ವಿಗುಣವಾಗುವುದು**

**ಲಕ್ಷಾಧೀಶ ಯೋಜನೆ**
**ರೂ. 1,00,000/-**

**ಚಿನ್ನಾಭರಣ ಸಾಲ**
ಪ್ರತಿ ಗ್ರಾಂ ಗೆ ₹ **6,800/-**ರ ತನಕ

ಪ್ರತಿ ತಿಂಗಳಿಗೆ ರೂ. 1,350 ತೊಡಗಿಸಿ 60 ತಿಂಗಳಲ್ಲಿ
ಪ್ರತಿ ತಿಂಗಳಿಗೆ ರೂ. 2,450 ತೊಡಗಿಸಿ 36 ತಿಂಗಳಲ್ಲಿ
ಪ್ರತಿ ತಿಂಗಳಿಗೆ ರೂ. 3,800 ತೊಡಗಿಸಿ 24 ತಿಂಗಳಲ್ಲಿ



ಪತ್ರಿಕೆಗೆ ಶುಭ ಬಯಸುವ–

ಮೊಬೈಲ್ : 9972989678
9448104174

**ರವಿಕಿರಣ್ ಕ್ರೊಲ**, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

## ಪುತ್ತೂರಿನ ‘ಶಿವಸದನ’ಕ್ಕೆ ದೇಣಿಗೆ



ಮಂಗಳೂರು ನಿವಾಸಿ ಡಾ. ಸುಧೀರ್ ರಾವ್ ಮತ್ತು ಡಾ. ಸುಮಂಗಲಾ ರಾವ್ ದಂಪತಿಗಳ ಪುತ್ರ ಡಾ। ಸುಶಾಂತ್ ಎಸ್. ರಾವ್ (MBBS, MS Orthopaedics Fellowship in Arthroscopy and Arthroplasty, Yenepoya Medical College, Deralakatte) ರೂ. 25,000/– ಸೊಸೆ ಡಾ. ಚೈತ್ರ ಎಸ್. ರಾವ್ (MBBS, MD General Medicine, Assistant Professor, Yenepoya Medical College, Deralakatte) ರೂ. 25,000/– ಒಟ್ಟು ರೂ. 50,000/– ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಹಾಗೂ ವಿಶೇಷ ಚೇತನರ ವಸತಿ ನಿಲಯ ‘ಶಿವಸದನ’ಕ್ಕೆ ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತ ಧನ್ಯವಾದಗಳು ಇವರು ಈ ಮೊದಲು ಶಿವಸದನಕ್ಕೆ ರೂ. 50,000/– ನೀಡಿದ್ದು, ಈಗ ಒಟ್ಟು ರೂ. 1,00,000/– (ರೂಪ್ಯಾ ಒಂದು ಲಕ್ಷ) ನೀಡಿದಂತಾಗಿದೆ.

---



ಬೆಂಗಳೂರು ನಿವಾಸಿ ಬಪ್ಪನಾಡು ಶ್ರೀ ಸೋಮಶೇಖರ ರಾವ್ ನಿವೃತ್ತ ಎಸ್.ಬಿ.ಐ. ಅಧಿಕಾರಿ ಹಾಗೂ ಶ್ರೀಮತಿ ವಿಜಯಲಕ್ಷ್ಮಿ ರಾವ್ ಇವರ ಸ್ಮರಣಾರ್ಥ ಅವರ ಮಗಳು ಶ್ರೀಮತಿ ದಯಾ ಸತೀಶ್ ರಾವ್ ಹಾಗೂ ಅಳಿಯ ಶ್ರೀ ಸತೀಶ್ ರಾವ್ ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಹಾಗೂ ವಿಶೇಷ ಚೇತನರ ವಸತಿನಿಲಯ ‘ಶಿವಸದನ’ಕ್ಕೆ ರೂ. 10,000/– ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತ ಧನ್ಯವಾದಗಳು. ಇವರು ಈ ಮೊದಲು ಶಿವಸದನಕ್ಕೆ ರೂ. 60,000/– ನೀಡಿದ್ದು ಈಗ ಒಟ್ಟು ರೂ. 70,000/– ನೀಡಿದಂತಾಗಿದೆ.

---


## ಶ್ರೀ ಸುಬ್ರಹ್ಮಣ್ಯ ಸಭಾದ ವಿದ್ಯಾರ್ಥಿವೇತನ ನಿಧಿಗೆ ಕೈಜೋಡಣೆ



ಮಂಗಳೂರು ನಿವಾಸಿ ಸುಬ್ರಹ್ಮಣ್ಯ ಸದನದಲ್ಲಿ ಇರುವ ಪ್ರೊ। ಕೆ. ಆರ್. ಉಪಾಧ್ಯಾಯರು 2025–26ರಲ್ಲಿ ಸುಬ್ರಹ್ಮಣ್ಯ ಸಭಾದ ಸ್ಕಾಲರ್‌ಶಿಪ್ ನಿಧಿಗೆ ರೂಪ್ಯಾ 10,000/–ವನ್ನು ದೇಣಿಗೆ ನೀಡಿದ್ದಾರೆ. ಆ ನಿಧಿಯಿಂದ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸುವ ಮೂಲಕ ಸಭೆಯ ಯೋಜನೆಯಲ್ಲಿ ಕೈಜೋಡಿಸಿದ್ದಾರೆ. ಇವರು 2022–23ರಲ್ಲಿ ❖ ತನ್ನ ಅಜ್ಜ ಅಜ್ಜಿಯರ ಹೆಸರಿನಲ್ಲಿ ❖ ತನ್ನ ತಂದೆ ತಾಯಿಯರ ಹೆಸರಿನಲ್ಲಿ ❖ ತನ್ನ ಅಣ್ಣ ಅತ್ತಿಗೆಯರ ಹೆಸರಿನಲ್ಲಿ ❖ ತನ್ನ ಮಡದಿಯ ಹೆಸರಿನಲ್ಲಿ ವಿದ್ಯಾರ್ಥಿವೇತನ ನಿಧಿಗಳನ್ನು ಸದನದಲ್ಲಿ ಸ್ಥಾಪಿಸಿರುವರು. ಶಿವಸದನಕ್ಕೂ ರೂ. 2,00,000/– ದೇಣಿಗೆ ನೀಡಿರುವರು. ದೇವರು ಅವರಿಗೆ ಆರೋಗ್ಯ, ನೆಮ್ಮದಿ, ಸಂತೋಷ, ದೀರ್ಘಾಯುಷ್ಯ ನೀಡಿ ಕಾಪಾಡಲಿ. ಇವರ ಸೇವೆ ಹೀಗೆ ಮುಂದುವರಿಯಲಿ ಎಂದು ಶ್ರೀಸಭಾವು ಹಾರೈಸುತ್ತದೆ.

---

**ರಾಮಾ ಅಟೋಮೊಬೈಲ್ಸ್**





ಮಾರುತಿ ವಾಹನ ತಜ್ಞರು

ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006

ಫೋನ್ : 0824 - 2454355, ಮೊಬೈಲ್ : 9448545702

ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

## ಪುತ್ತೂರಿನ ‘ಶಿವಸದನ’ಕ್ಕೆ ದೇಣಿಗೆ



ಮಂಗಳೂರು ನಿವಾಸಿ ಚೆಂಡುಕಳ ಶ್ರೀ ಶ್ರೀಪತಿ ರಾವ್ ಮತ್ತು ಶ್ರೀಮತಿ ಶಾರದ ರಾವ್ ಇವರ ಪುತ್ರ ಶ್ರೀ ಅಶೋಕ್ ರಾವ್ ಸಿ. ಸೊಸೆ ಶ್ರೀಮತಿ ನಮಿತಾ ರಾವ್, ಮೊಮ್ಮಗ ಚಿ। ಅಭಿನವ್ ರಾವ್ ಇವರು ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಹಾಗೂ ವಿಶೇಷಚೇತನರ ವಸತಿನಿಲಯ ‘ಶಿವಸದನ’ಕ್ಕೆ ರೂ. 10,000/– ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತ ಧನ್ಯವಾದಗಳು.

---

## ಶ್ರೀ ಸುಬ್ರಹ್ಮಣ್ಯ ಸಭಾದ ವಿದ್ಯಾರ್ಥಿವೇತನ ನಿಧಿಗೆ ಕೊಡುಗೆ

ಬೆಂಗಳೂರು ನಿವಾಸಿ ಶ್ರೀಮತಿ ಡಾ। ನಿಲೀಮಾ ಸುರೇಶ್ ಹಾಗೂ ಶ್ರೀ ಸನಂದ್ ಡಿ. ರಾವ್ ಇವರು ತಮ್ಮ ಹೆತ್ತವರಾದ ಶ್ರೀಮತಿ ಮೋಹಿನಿ ದಯಾನಂದ್ ರಾವ್ ಮತ್ತು ಶ್ರೀ ಡಾ. ದಯಾನಂದ್ ರಾವ್ ದಂಪತಿಗಳ ಆಶಯದಂತೆ ಡಾ। ದಯಾನಂದ್ ಎಸ್. ರಾವ್ ಎಜುಕೇಶನಲ್ ಟ್ರಸ್ಟ್ ವತಿಯಿಂದ ಶ್ರೀ ಸುಬ್ರಹ್ಮಣ್ಯ ಸಭಾದ ವಿದ್ಯಾರ್ಥಿವೇತನ ನಿಧಿಗೆ ಶ್ರೀ ಐ. ಕೆ. ರಘುರಾಮ್ ರಾವ್ ಇವರ ಸ್ಮರಣಾರ್ಥ ರೂ. 3,00,000/– ಹಾಗೂ ಶ್ರೀ ಎಚ್. ವಾಸುದೇವ ರಾವ್ ಸ್ಮರಣಾರ್ಥ ರೂ. 3,00,000/– ಸಾಲ ವಿದ್ಯಾರ್ಥಿವೇತನ ನಿಧಿಗೆ ದೇಣಿಗೆ ನೀಡಿರುವರು. ಇದುವರೆಗೆ ಹಿಂದಿನ ಸಾಲಿನ ತನಕ ಬಂದ ಒಟ್ಟು ಮೊತ್ತ ರೂ. 68,00,011/– ನೀಡಿರುವರು. ಈಗ ರೂ. 6,00,000/– ನೀಡಿ ಆ ಮೊತ್ತವನ್ನು ರೂ. 74,00,011/– ಹೆಚ್ಚಿಸಿರುವರು. ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅವರಿಗೆ ಹಾರ್ದಿಕ ಧನ್ಯವಾದಗಳು.

---

## ಶ್ರೀ ಸಭಾ ಸಾಲ ವಿದ್ಯಾರ್ಥಿವೇತನ ನಿಧಿಗೆ ದೇಣಿಗೆ

ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ‘ಶ್ರೀಮತಿ ರಮಾದೇವಿ ಮತ್ತು ಶ್ರೀ ರಾಮರಾವ್ ಸ್ಮಾರಕ ಸಾಲ ವಿದ್ಯಾರ್ಥಿವೇತನ ನಿಧಿ’ಯನ್ನು ರೂ. 1,00,000/– ನೀಡಿ ಅವರ ಮಗಳು ಶ್ರೀಮತಿ ಸುಮಂಗಲ ಕಲಾಸಾಗರ್ ಈ ಹಿಂದೆ ಸ್ಥಾಪಿಸಿದ್ದು, ಈಗ ಅವರ ಪುತ್ರ ಶ್ರೀ ಗಣೇಶ ಕೆ. ಆರ್. ಆ ನಿಧಿಯನ್ನು ರೂ. 50,000/– ದೇಣಿಗೆ ನೀಡಿ ರೂ. 1,50,000/–ಕ್ಕೆ ಹೆಚ್ಚಿಸಿರುವರು. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತ ಧನ್ಯವಾದಗಳು.

---

ಪತ್ರಿಕೆಗೆ ಶುಭ ಬಯಸುವ –

**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**

ಶ್ರೀ ಗಣೇಶ ಕೃಪಾ, ಪೃಥ್ವೀ ಲೇ ಔಟ್, ಕೂಳೂರು, ಮಂಗಳೂರು - 575 013

Prop: Somashekhar
Mob: 9844551244

**WONDER CREATION**
Decor & Event planners

Our Services :-
- Corporate Events
- All Types Of Stage Decoration
- Sounds And Lights
- Led Wall Rentals
- Selfie Booth Concept
- Shamiyana/Tint Sheet/Plat Form Chairs/Round Table etc....
- Photography & Videography

2T-145-3A, Kulai Gudde Road, Kulai, Surathkal

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವಿದ್ಯಾಭ್ಯಾಸ ನಿಧಿ


ಛಾಯಾಚಿತ್ರ : ರಘುವೀರ್ ಪೆರ್ಡೂರು

ಶ್ರೀ ಇನ್ನ ಚಂದ್ರಕಾಂತ ರಾವ್, ತಮ್ಮ ಮಾತಾಪಿತೃಗಳಾದ ಶ್ರೀ ದಿನೇಶ ರಾವ್ ಮತ್ತು ಶ್ರೀಮತಿ ವಿಮಲಾ ದಿನೇಶ್ ರಾವ್ ಅವರ ಹೆಸರಿನಲ್ಲಿ ಒಂದು ವಿದ್ಯಾಭ್ಯಾಸ ನಿಧಿಯನ್ನು ಸ್ಥಾಪಿಸಲು ರೂ. 1,08,000/–ವನ್ನು ಶ್ರೀ ಸಭಾಗೆ ಕೊಟ್ಟಿರುತ್ತಾರೆ. ಅವರ ಬಂಧುಗಳ ಜೊತೆ ಸೇರಿಕೊಂಡು ಮುಂದಕ್ಕೆ ಈ ನಿಧಿಯನ್ನು ರೂ. 10 ಲಕ್ಷಕ್ಕೆ ಏರಿಸುವ ಗುರಿಯನ್ನು ಹೊಂದಿರುತ್ತಾರೆ. ಅದರಂತೆ ಅವರ ಬಾವ ಶ್ರೀ ವಿದ್ಯಾಧರ ಅಲೆವೂರು ಮತ್ತು ಸಹೋದರಿ ಶ್ರೀಮತಿ ಉಷಾ ಕಿರಣ್ ಈ ನಿಧಿಗೆ ರೂ. 1,02,000/–ಯನ್ನು ಸೇರಿಸಿದ್ದು, ಈಗ ಈ ನಿಧಿಯ ಮೊತ್ತವು ರೂ. 2,10,000/–ವಾಗಿದೆ. ದಾನಿಗಳ ಮುಖ್ಯ ಉದ್ದೇಶ ಈ ನಿಧಿಯಿಂದ ಬರುವ ಬಡ್ಡಿ ಹಣವನ್ನು ನಮ್ಮ ಸಮಾಜದ  ಹತ್ತನೇ ತರಗತಿಯ ತನಕ ಕಲಿಯುವ (ಪ್ರಾಥಮಿಕ ಶಾಲೆ) ಅರ್ಹಮಕ್ಕಳಿಗೆ ವಿದ್ಯಾರ್ಥಿವೇತನವನ್ನು ಕೊಡಲು ಮಾತ್ರ ಉಪಯೋಗಿಸಬೇಕು, ಪ್ರಾಥಮಿಕ ಹಂತದಲ್ಲಿ, ಶಾಲಾಶುಲ್ಕ ಕಟ್ಟಲು ತೊಂದರೆಯಾಗಿ, ಕಲಿಕೆಯಿಂದ ಮಕ್ಕಳು ವಂಚಿತರಾಗಬಾರದು ಎಂಬ ಸದಾಶಯ. ಇಂತಹ ಉತ್ತಮ ಚಿಂತನೆಯಿಂದ, ಶ್ರೀ ಚಂದ್ರಕಾಂತ ರಾವ್ ಮತ್ತು ಅವರ ಕುಟುಂಬದವರು ಪ್ರಾರಂಭಿಸಿದ ಈ ಉದಾತ್ತ ಕಾರ್ಯಕ್ಕೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ತುಂಬುಹೃದಯದ ಅಭಿನಂದನೆಗಳು. ಅವರಿಂದ ಇಂತಹ ಸತ್ಕಾರ್ಯಗಳು ಇನ್ನೂ ಉತ್ತಮ ರೀತಿಯಲ್ಲಿ ನಡೆಯಲಿ ಎಂದು ಹಾರೈಕೆ.

## ವಿಶೇಷಚೇತನ ಮಕ್ಕಳ ಶಾರೀರಿಕ, ಮಾನಸಿಕ ಬೆಳವಣಿಗೆಗೆ ಶಿಕ್ಷಣೋಪಕರಣದ ಕೊಡುಗೆ



ಪುತ್ತೂರು ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯ, ಶಿವಸದನ, ಮುರ ಇಲ್ಲಿನ ವಿಶೇಷಚೇತನ ಶಾಲೆಯ ಮಕ್ಕಳಿಗೆ ಅವರ ಸರ್ವತೋಮುಖ ಶಾರೀರಿಕ ಬೆಳವಣಿಗೆಗೆ ಅಗತ್ಯವಿದ್ದ FIT TRAMPO ಎಂಬ ಶಿಕ್ಷಣೋಪಕರಣದ ಕೊಡುಗೆಯನ್ನು ಶ್ರೀಮತಿ ರತ್ನ ರಾಜೇಂದ್ರ, ಶ್ರೀಮತಿ ಸುಮಂಗಲಾ ಪ್ರಭಾಕರ್, ಶ್ರೀಮತಿ ರಕ್ಷಾ ನಂದಿಕೂರ್ ಜೊತೆಯಾಗಿ ನೀಡಿರುವರು. ಇದರ ಉಪಯೋಗದಿಂದ ಮಕ್ಕಳ ಕೈ ಕಾಲುಗಳು, ಸ್ನಾಯುಗಳು ಬಲವಾಗುತ್ತದೆ. ಸಮತೋಲನ ಹಾಗೂ ದೇಹ ನಿಯಂತ್ರಣ ಬೆಳೆಸಲು ಸಹಾಯಕವಾಗುತ್ತದೆ. ದೈಹಿಕ ವ್ಯಾಯಾಮದ ಮೂಲಕ ಆರೋಗ್ಯ ಉತ್ತಮಗೊಂಡು ಮನಸ್ಸಿಗೆ ಸಂತೋಷ, ಆತ್ಮವಿಶ್ವಾಸ ಉಂಟಾಗಿ ಒತ್ತಡ, ಬೇಸರ, ಚಿಂತೆ ಕಡಿಮೆಯಾಗುತ್ತದೆ. ಈ ಒಂದು ಉಪಕರಣವನ್ನು ಮಕ್ಕಳಿಗೆ ದೇಣಿಗೆ ನೀಡಲು ಸಹಕರಿಸಿದ ಎಲ್ಲರಿಗೂ ಮನದಾಳದ ಕೃತಜ್ಞತೆಗಳು.

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTERS**
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001



## ಪುತ್ತೂರು ಶಿವಸದನದಲ್ಲಿ ಯಕ್ಷಗಾನ ತಾಳಮದ್ದಳೆ



ತಾ. 17–7–2025ನೇ ಬುಧವಾರ ಕದ್ರಿ ಯಕ್ಷ ಮಂಜುಳಾ ಮಹಿಳಾ ಬಳಗದ ಯಕ್ಷಗಾನ ತಾಳಮದ್ದಳೆ ನಡೆಯಿತು. ಕಲಾವಿದರಾಗಿ ಶ್ರೀಮತಿ ಅರುಣಾ ಸೋಮಶೇಖರ್, ಶ್ರೀಮತಿ ಶೈಲಜಾ ಶ್ರೀಕಾಂತ್ ಭಾಗವಹಿಸಿದ್ದು, ಶ್ರೀ ಸಭಾದ ಶ್ರೀ ಕರುಣಾ ರಾವ್ ಬೆಳ್ಳೆ, ಶ್ರೀಮತಿ ಸುಮಂಗಲ ಪ್ರಭಾಕರ್, ಶ್ರೀ ಪಿ. ಶ್ರೀಕಾಂತ್ ರಾವ್ ವ್ಯವಸ್ಥೆಯಲ್ಲಿ ಸಹಕರಿಸಿದರು. ಹಿರಿಯರೆಲ್ಲರೂ ಶಾಂತಚಿತ್ತರಾಗಿ ಆಲಿಸುತ್ತಾ ಇದ್ದುದು ಎಲ್ಲರಿಗೂ ಮೌನ ಪ್ರೇರಣೆಯಾಗಿತ್ತು. ಎಲ್ಲರ ಚಪ್ಪಾಳೆಯೇ ಕಲಾವಿದರಿಗೆ ಆಶೀರ್ವಾದ, ಚೇತನಾಶಕ್ತಿ. ಸೇವಾನಿರತ ದಾದಿಯರು, ಸ್ವಯಂಸೇವಕ ಕಾರ್ಯಕರ್ತರ ತಾಳ್ಮೆ, ಶ್ರಮ, ಕಾಳಜಿ ಹೃದಯವನ್ನು ತಟ್ಟಿತು. ಎಲ್ಲರಿಗೂ ಭಗವಂತನ ಅನುಗ್ರಹವಿರಲಿ. ಶಿವಸದನದ ಚಟುವಟಿಕೆಗಳು ನಿರ್ವಿಘ್ನವಾಗಿ ನಡೆಯುತ್ತಿರಲಿ... ಶುಭವಾಗಲಿ...

## ಶುಭವಿವಾಹ

ಮಡಿಯಾಲ ಶ್ರೀ ಭಾಸ್ಕರ ರಾವ್ ಮತ್ತು ಶ್ರೀಮತಿ ವಾಣಿ ಇವರ ಸುಪುತ್ರಿ **ಚಿ। ಸೌ। ಮಧುಶ್ರೀ** ಹಾಗೂ ಶ್ರೀ ಸದಾನಂದ ರಾವ್ ಶುಂಠಿಪಾಡಿ ಮತ್ತು ಶ್ರೀಮತಿ ವನಿತ ಇವರ ಸುಪುತ್ರ **ಚಿ। ರಜತ್** ಇವರ ವಿವಾಹಮಹೋತ್ಸವವು ಶ್ರೀ ಮಹಿಷಮರ್ದಿನಿ ದೇವಸ್ಥಾನ, ಪುಣಚ ಇದರ 'ಶ್ರೀದೇವಿ ಭವನ'ದಲ್ಲಿ ದಿನಾಂಕ 28–08–2025ನೇ ಗುರುವಾರ  ನೆರವೇರಿತು.

## ಶ್ರೀ ಹರೀಶ್ ಕುಮಾರ್ ವಿ. ಇವರಿಗೆ ಪದೋನ್ನತಿ



ಶ್ರೀ ಹರೀಶ್ ಕುಮಾರ್ ವಿ. (ಶ್ರೀ ನಾಗೇಶ್ ರಾವ್ ವಿಟ್ಲ ಇವರ ಪುತ್ರ) ಇವರು ಮಂಗಳೂರು ಮೆಸ್ಕಾಂ ಆಡಳಿತ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್ (ವಿ.) ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಬಳಿಕ ಮುಖ್ಯ ಇಂಜಿನಿಯರ್ (ವಿದ್ಯುತ್) ಹುದ್ದೆಗೆ ಪದೋನ್ನತಿಯೊಂದಿಗೆ ಚೆಸ್ಕಾಂ ಹಾಸನ ವಲಯಕ್ಕೆ ವರ್ಗಾವಣೆಗೊಂಡು ತಾ. 25–04–2025ರಂದು ಅಧಿಕಾರ ವಹಿಸಿಕೊಂಡಿರುತ್ತಾರೆ. ಮುಂದುವರಿದಂತೆ ತಾ. 03–09–2025ರಂದು ಡೈರೆಕ್ಟರ್ ಟೆಕ್ನಿಕಲ್ ಮೆಸ್ಕಾಂ ಆಗಿ ಪದೋನ್ನತಿಗೊಳ್ಳುವ ಮೂಲಕ ಚೆಸ್ಕಾಂ ಹಾಸನ ವಲಯದಿಂದ ಬಿಡುಗಡೆಗೊಂಡು ಮಂಗಳೂರು ಕೇಂದ್ರ ಕಛೇರಿಯಲ್ಲಿ ತಾ. 04–09–2025ರಂದು ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಇದು ನಮ್ಮ ಸಮಾಜಕ್ಕೆ ಹೆಮ್ಮೆಯ ವಿಷಯವಾಗಿದ್ದು, ಶ್ರೀಯುತರು ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬಂಟ್ವಾಳ ವಲಯ – ವಿಟ್ಲ ಇದರ ಸಕ್ರಿಯ ಪದಾಧಿಕಾರಿಯಾಗಿದ್ದು, ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಪ್ರತಿಷ್ಠಾನ (ರಿ.), ಬಂಟ್ವಾಳ ಇದರ ಧರ್ಮದರ್ಶಿಗಳಾಗಿಯೂ ಕರ್ತವ್ಯ ನಿರ್ವಹಿಸಿರುತ್ತಾರೆ. ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ (ನಿ.) ಇದರಲ್ಲಿಯೂ ಉತ್ತಮ ಸೇವೆ ಸಲ್ಲಿಸುವ ಮೂಲಕ ಇನ್ನೂ ಮೇಲ್ದರ್ಜೆಯ ಹುದ್ದೆಗೆ ಪದೋನ್ನತಿಯನ್ನು ಹೊಂದಿ ಸಾರ್ಥಕ ಸೇವೆ ಸಲ್ಲಿಸಲಿ ಎಂಬ ಸದಾಶಯಗಳೊಂದಿಗೆ.

ಪತ್ರಿಕೆಗೆ ಶುಭ ಬಯಸುವ–
**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**



**PRAVEEN KUMAR ADYAPADY**
**NOTARY & ADVOCATE**
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

# ಭಾವ ಭಾವನೆಯ ಅಭಿವ್ಯಕ್ತಿ, ವೇದಿಕೆಯ ವೈಭವ ವಿದುಷಿ ತನ್ವಿ ರಾವ್

ಪುತ್ತೂರಿನ ಶಿವಸದನದಲ್ಲಿ ಹಿರಿಯರು ಮತ್ತು ವಿಶೇಷ ಚೇತನರ ವಸತಿನಿಲಯದಲ್ಲಿ ತನ್ನ ನೃತ್ಯ ಪ್ರದರ್ಶನವನ್ನು ನೀಡಿದ ಬಳಿಕ ಎಲ್ಲರೊಂದಿಗೆ ನಗುನಗುತ್ತಲೇ ಸಮಯವನ್ನು ಕಳೆದಳು ಬೆಳ್ಳಿತೆರೆ ಮತ್ತು ಕಿರುತೆರೆ ನಟಿ ಭರತನಾಟ್ಯ ಕಲಾವಿದೆ ವಿದುಷಿ ತನ್ವಿ ರಾವ್ ಕದ್ರಿ. ತಾಳಮೇಳದ ಸೌಂದರ್ಯವನ್ನು ನೃತ್ಯದಲ್ಲಿ ಮತ್ತು ಭಾವೈಕ್ಯ ಪ್ರೌಢತೆಯನ್ನು ಅಭಿನಯದಲ್ಲೂ ಆಳವಾಗಿ ಅಭಿವ್ಯಕ್ತಗೊಳಿಸಿದ್ದಾಳೆ. ಅವಳ ಮುಖಭಾವ, ಆಂಗಿಕ ಅಭಿನಯ ಮತ್ತು ಸಂವೇದನೆಗಳ ನಿಯಂತ್ರಣ ವೇದಿಕೆಯಲ್ಲಿ ಕೊನೆಯವರೆಗೂ ಪ್ರೇಕ್ಷಕರ ಹೃದಯ ಗೆದ್ದಿತು.

ಈ ಯುವಪ್ರತಿಭೆ ಜೀವನದುದ್ದಕ್ಕೂ ನೃತ್ಯ ಪ್ರದರ್ಶನಗಳನ್ನು ನೀಡಿ ಪ್ರಶಂಸೆ ಗಳಿಸಲಿ, ಇತರ ಯುವಪ್ರತಿಭೆಗಳಿಗೆ ಪ್ರೇರಣೆಯ ಶಕ್ತಿಯಾಗಿ ಬೆಳೆಯಲಿ ಎಂಬುದು ನಮ್ಮ ಹಾರೈಕೆ. ಇದೇ ಸಂದರ್ಭದಲ್ಲಿ ವಿಶೇಷ ಚೇತನ ಮಕ್ಕಳ, ಶಿಕ್ಷಕಿಯರ ಪ್ರಾರ್ಥನೆಯಿಂದ ಆರಂಭಗೊಂಡ ಈ ಕಾರ್ಯಕ್ರಮವು ಶಿವಸದನದ ಟ್ರಸ್ಟಿನ ಅಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ಎಲ್ಲರನ್ನೂ ಪ್ರೀತಿಯಿಂದ ಸ್ವಾಗತಿಸಿದರು. ಟ್ರಸ್ಟ್ ಸದಸ್ಯರಾದ ಶ್ರೀಮತಿ ಶಕುಂತಲಾ ರಾವ್. ಹೂನೀಡಿ ಸ್ವಾಗತಿಸಿದರೆ, ಕಾರ್ಯದರ್ಶಿ ಶ್ರೀ ಕರುಣ್ ಬೆಳ್ಳೆ, ಶ್ರೀಮತಿ ಗಾಯತ್ರಿ ಪಿಲಿಂಜ, ಶ್ರೀಮತಿ ವನಿತಾ ರಾವ್, ಶ್ರೀ ಸತ್ಯನಾರಾಯಣ ರಾವ್, ಶ್ರೀ ಮೋಹನ್ ದಾಸ್ ಪಿಲಿಂಜ ಕಾರ್ಯಕ್ರಮಕ್ಕೆ ಸಹಕರಿಸಿದರು.

ಶ್ರೀಮತಿ ರತ್ನ ರಾಜೇಂದ್ರ, ಕುಮಾರಿ ತನ್ವಿ ರಾವ್ ಅವರನ್ನು ಪರಿಚಯಿಸಿದರು. ಶ್ರೀ ಸುಬ್ರಹ್ಮಣ್ಯ ಸಭಾ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಜೊತೆ ಕಾರ್ಯದರ್ಶಿ ಶ್ರೀ ಚೇತನ್ ಶರ್ಮ ವ್ಯವಸ್ಥೆಗಳಲ್ಲಿ ಸಹಕರಿಸಿದರು. ವಿಶೇಷ ಚೇತನ ಮಕ್ಕಳು ಆಟಿ ಕಳೆಂಜ ನೃತ್ಯ, ದೇಶ ಭಕ್ತಿಗೀತೆ, ನೃತ್ಯ ಕಾರ್ಯಕ್ರಮ ನೀಡಿದರು.



ಕಾರ್ಯಕ್ರಮದ ಬಳಿಕ ಕುಮಾರಿ ತನ್ವಿರಾವ್ ಅವರನ್ನು ಹೆತ್ತವರೊಂದಿಗೆ ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು ಮತ್ತು 'ಶಿವಸದನ'ದ ವತಿಯಿಂದ ಶಾಲು ಹೊದಿಸಿ ಸನ್ಮಾನಿಸಲಾಯಿತು. ಟ್ರಸ್ಟಿನ ಕೋಶಾಧಿಕಾರಿ ಶ್ರೀ ದಿನಕರ ರಾವ್ ಇವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು. ಎಲ್ಲರಿಗೂ ವಿಶೇಷ ಭೋಜನವನ್ನು ಶ್ರೀಮತಿ ರೂಪಲಕ್ಷ್ಮಿ ರಾವ್ ತನ್ನ ಪುತ್ರ ಚಿ| ಅನುರಾಗ್‌ನ ಹುಟ್ಟುಹಬ್ಬದ ಪ್ರಯುಕ್ತ ಪ್ರಾಯೋಜಿಸಿದ್ದರು ಮತ್ತು ಸುಮಧುರ ಹಾಡನ್ನು ಹಾಡಿ ಎಲ್ಲರನ್ನೂ ರಂಜಿಸಿದರು.

ಎಲ್ಲಾ ಹಿರಿಯರು ಚಿ| ಅನುರಾಗ್ ಹಾಗೂ ಕು| ತನ್ವಿ ರಾವ್ ಮನಃಪೂರ್ವಕವಾಗಿ ಹಾರೈಸಿದರು. ಶ್ರೀ ಸುಬ್ರಹ್ಮಣ್ಯ ಸಭಾ ಸದಸ್ಯರು, ಟ್ರಸ್ಟಿನ ಸದಸ್ಯರು, ಪುತ್ತೂರಿನ ಬಂಧುಗಳು, ಶಿವಸದನದ ಸಿಬ್ಬಂದಿ ವರ್ಗದವರು, ಹಿರಿಯರು, ಮಕ್ಕಳು, ಶಿಕ್ಷಕಿಯರು, ಕುಮಾರಿ ತನ್ವಿಯ ಬಂಧುಗಳು, ಎಲ್ಲರೂ ನೃತ್ಯ ಕಾರ್ಯಕ್ರಮಕ್ಕೆ ಆಗಮಿಸಿ, ಚಂದಗಾಣಿಸಿ ಕೊಟ್ಟರು. ವಿಡಿಯೋ ಮಾಡಲು ಸಹಕರಿಸಿದ ಡಾ| ವಿದುಷಿ ಗಾನ ಪಿಲಿಂಜ ಇವಳಿಗೂ ಮನದಾಳದ ವಂದನೆಗಳು.

*ವರದಿ : ಶ್ರೀಮತಿ ಸುಮಂಗಲಾ ಪ್ರಭಾಕರ್*

## ಉಪನಯನ

ಶ್ರೀ ಸದಾನಂದ ಗಣೇಶ್ ಶಾಸ್ತ್ರಿ ಮತ್ತು ಶ್ರೀಮತಿ ಅಮೃತ ಶಾಸ್ತ್ರಿ ಇವರ ಪುತ್ರ **ಚಿ| ಅಥರ್ವ ಶಾಸ್ತ್ರಿ** ಇವನ ಉಪನಯನವು ತಾ. 24-8-2025ನೇ ರವಿವಾರ 'ಟಿಟಿಡಿ ಕಲ್ಯಾಣಮಂಟಪ', ವೈಯಾಲಿಕಾವಲ್, ಬೆಂಗಳೂರಿನಲ್ಲಿ ನಡೆಯಿತು.

Sri Hari Adyapady
Proprietor
Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE
We undertake all types of Electrical, Plumbing and Sanitary works

Prop. : SUDHAKAR BELLE
: 9845193103/ 9481563103
KARAN DIGITAL STUDIO
Sadasukh Building, Nr. Postoffice, Padubidri - 574 111
Opp. Busstand Belman
All Marriage & Other functions
Photography & Videography Available

ಪತ್ರಿಕೆಗೆ ಶುಭ ಬಯಸುವ–
ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ದೃತಿ ಮತ್ತು ದ್ರುವ್

NAVADURGA FINANCIALS
Estd 1998
SCAN ME TO KNOW MORE!!!

## ಅಳಿದ ನಮ್ಮನೆ... ಇಳಿದುವುದು ಸುಮ್ಮನೆ...




ದಿ| ನೂರಲ್‌ಬೆಟ್ಟು ಶ್ರೀಧರ್ ರಾವ್ ಅವರ ಧರ್ಮಪತ್ನಿ ಹಾಗೂ ನಾಗೋರಿ ದಿ| ಆನಂದ ರಾವ್ ಸರಸ್ವತಿ ದಂಪತಿಗಳ ಪುತ್ರಿ **ಶ್ರೀಮತಿ ಶಕುಂತಲಾ** (82) ತಾರೀಕು 22-08-2025ನೇ ಶುಕ್ರವಾರ ದೈವಾಧೀನರಾದರು.

●●●



ಸುರತ್ಕಲ್ ಕಾಟಿಪಳ್ಳ **ಶ್ರೀಮತಿ ಯಶೋದಾ ಶಿವರಾವ್** (87) ತಾ. 20-8-2025ನೇ ಬುಧವಾರ ನಿಧನರಾದರು. ಅವರು ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

●●●



ಉಡುಪಿ ಎಸ್.ಎಂ.ಪಿ. ಸಂಸ್ಕೃತ ಕಾಲೇಜಿನಲ್ಲಿ ಹಿರಿಯ ಗ್ರಂಥಪಾಲಕರಾಗಿ ನಿವೃತ್ತರಾಗಿದ್ದ **ಅಡೂರು ಹರಿಕೃಷ್ಣ ರಾವ್** (65) ತಾ. 07-09-2025ನೇ ರವಿವಾರ ದೈವಾಧೀನರಾದರು.

ಅವರು ಪತ್ನಿ ಡಾ. ನಿರ್ಮಲ ಕುಮಾರಿ, ಪುತ್ರ ಕಾರ್ತಿಕೇಯ ಕೃಷ್ಣ, ಸೊಸೆ ಸುರಭಿ ಮತ್ತು ಬಂಧು-ಮಿತ್ರರನ್ನು ಅಗಲಿದ್ದಾರೆ.

●●●



ಪುತ್ತೂರು ಕೊಂಬೆಟ್ಟು ನಿವಾಸಿ **ಎಂ. ಶ್ರೀಪತಿ ರಾವ್** (76) ಇವರು ತಾ. 27-8-2025ನೇ ಬುಧವಾರ ದೈವಾಧೀನರಾದರು. ಅವರು ಪತ್ನಿ ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

●●●



ಅಡೂರು ದಿ| ಡಾ. ಎ. ಸಿ. ರತ್ನಾಕರ ರಾವ್ ಅವರ ಪತ್ನಿ **ಎ. ಸಿ. ಪ್ರವೀಣ ರತ್ನಾಕರ ರಾವ್** (68) ಅವರು ತಾ. 11-09-2025ನೇ ಗುರುವಾರ ದೈವಾಧೀನರಾದರು. ಇವರು ಇಬ್ಬರು ಪುತ್ರರನ್ನು ಅಗಲಿದ್ದಾರೆ.

M.Devanand bhat
Mob: 9845644556
9663993883
Shobha Digital STUDIO
Belavai 08258-276177
Moodabidri 9901995655
Yedapadavu 0824-2256374
mdevanandbhat@gmail.com


## ಭಾದ್ರಪದ ಶುಕ್ಲ ಚೌತಿಯಂದು (ಆಗಸ್ಟ್ 27) ಶೃಂಗೇರಿ ಜಗದ್ಗುರುಗಳ ಆದೇಶದಂತೆ

# ಶ್ರೀ ಗಣೇಶ ಹಬ್ಬದ ಆಚರಣೆಯ ಸಂಭ್ರಮ



ಆಗಸ್ಟ್ 27ರಂದು ಭಾದ್ರಪದ ಶುಕ್ಲ ಚೌತಿಯಂದು ಆಚರಿಸುವ ಗಣೇಶ ಹಬ್ಬವನ್ನು ಶ್ರದ್ಧಾ ಭಕ್ತಿಯಿಂದ, ಸಾಂಪ್ರದಾಯಿಕವಾಗಿ, ಯಾವುದೇ ಭೇದ–ಭಾವವಿಲ್ಲದೆ ಎಲ್ಲರೂ ಒಟ್ಟಾಗಿ, ಸಂಘ–ಸಂಸ್ಥೆಗಳಲ್ಲಿ, ಆಚರಿಸಬೇಕೆಂದು ಶೃಂಗೇರಿ ಜಗದ್ಗುರುಗಳ ಆದೇಶವಾಗಿದೆ. ಸಾಂಪ್ರದಾಯಿಕ ಭಕ್ತಿಗೀತೆಗಳು, ಶಾಸ್ತ್ರೀಯ ಸಂಗೀತ, ಭರತನಾಟ್ಯ, ಭಜನೆ ಮುಂತಾದ ವಿವಿಧ ಕಾರ್ಯಕ್ರಮಗಳೊಂದಿಗೆ ಭಕ್ತಿಯಿಂದ 27, 28, 29 ಈ ಮೂರು ದಿನಗಳಲ್ಲಿ ಹಬ್ಬವನ್ನು ಆಚರಿಸಬೇಕು ಎಂದು ಗುರುಗಳ ಆದೇಶ ಅನ್ವಯ ತಾರೀಕು 28–8–2025ನೇ ಗುರುವಾರ ಬೆಳಗ್ಗೆ ಶ್ರೀ ಸುಬ್ರಹ್ಮಣ್ಯ ಸಭಾಸದನದಲ್ಲಿ ಶ್ರೀ ಗಣೇಶ ಚತುರ್ಥಿಯನ್ನು ಬೆಳಗ್ಗೆ 7–30ರಿಂದ ಗಣಹೋಮ, 8–30ರಿಂದ 9–30 ತನಕ ಶಾರದಾಂಬ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ ನಡೆಯಿತು. ಶ್ರೀ ಸಭಾದ ಸದಸ್ಯರು ಭಾಗವಹಿಸಿ, ಕಾರ್ಯಕ್ರಮವನ್ನು ಭಕ್ತಿಪೂರ್ವಕವಾಗಿ ನಡೆಸಿದರು. ಶ್ರೀ ಸುಬ್ರಹ್ಮಣ್ಯ ಸದನದ ಅಧ್ಯಕ್ಷರಾದ ಡಾ| ಎ. ಪಿ. ಕೃಷ್ಣ ಹಾಗೂ ಶ್ರೀಮತಿ ಸುಮನಾ ಕೃಷ್ಣ ದಂಪತಿಗಳು ಗಣಹೋಮದ ಕರ್ತೃಗಳಾಗಿದ್ದರು. ಪ್ರಸಾದ ವಿತರಣೆಯೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು. ಅದೇ ರೀತಿ ತಾರೀಕು 29–08–2025ನೇ ಶುಕ್ರವಾರ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯ, ಮುರ ಇಲ್ಲಿ ಮುಂಜಾನೆ ಶ್ರೀ ಸತ್ಯನಾರಾಯಣ್ ರಾವ್ ದಂಪತಿಗಳು ಕರ್ತೃಗಳಾಗಿ ಗಣಹೋಮದಲ್ಲಿ ಭಾಗವಹಿಸಿದ್ದರು. ಹಿರಿಯ ನಾಗರಿಕರು ಗಣಪತಿಯ ಭಜನೆಗಳನ್ನು ಹಾಡಿದರು. ಮಂಗಳಾರತಿಯೊಂದಿಗೆ ಪೂಜೆ ಮುಕ್ತಾಯವಾಗಿ ಪುತ್ತೂರಿನ ಮಿತ್ರ ಸಮಾಜ ಭಜನಾ ಮಂಡಳಿಯ ಸದಸ್ಯರಿಂದ ಶೃಂಗೇರಿಯ ಭಜನೆಗಳು ಗಣೇಶ ಪಂಚರತ್ನ ಸ್ತೋತ್ರ ಎಲ್ಲವನ್ನು ಹಾಡಿ ಎಲ್ಲರ ಮೆಚ್ಚುಗೆ ಗಳಿಸಿದರು. ಅನಂತರ ಎಲ್ಲರೂ ವಿಶೇಷ ಭೋಜನವನ್ನು ಸ್ವೀಕರಿಸಿದರು. ಶ್ರೀ ಕರುಣ್ ರಾವ್ ಬೆಳ್ಳೆ ಇವರ ನೇತೃತ್ವದಲ್ಲಿ ಈ ಸುಂದರ ಕಾರ್ಯಕ್ರಮವು ಮೂಡಿಬಂದಿರುತ್ತದೆ. ಶಿವಸದನದ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ಧನ್ಯವಾದ ಸಮರ್ಪಿಸಿದರು. ಟ್ರಸ್ಟಿನ ಕೋಶಾಧಿಕಾರಿ ಶ್ರೀ ದಿನಕರ್ ರಾವ್ ಟ್ರಸ್ಟ್‌ನ ಸದಸ್ಯೆ ಗಾಯತ್ರಿ ಪಿಲಿಂಜ, ಪುತ್ತೂರಿನ ಬಂಧುಗಳು, ಅಲ್ಲಿನ ನಿವಾಸಿಯವರು ಸಿಬ್ಬಂದಿ ವರ್ಗದವರು, ವಿಶೇಷಚೇತನ ಮಕ್ಕಳು, ಶಿಕ್ಷಕಿಯರು, ಸಹಕರಿಸಿದ ಎಲ್ಲರಿಗೂ ಇಂದು ನಡೆದ ವಿವಿಧ ಕಾರ್ಯಕ್ರಮಗಳು ಮನಸ್ಸಿಗೆ ಖುಷಿಯಾಗಿ ಸಂತಸ ವ್ಯಕ್ತಪಡಿಸಿದರು.

ಪತ್ರಿಕೆಗೆ ಶುಭ ಬಯಸುವ–




**ಶ್ರೀ ನಾಗರಾಜ್ ಶರ್ಮ**

ಹಾಗೂ

**ಶ್ರೀಮತಿ ಆರತಿ ಶರ್ಮ**

'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ

ಮಂಗಳೂರು - 575 002 ✆ : 9880258216



**PRAMOD AUTOMOBILES**

30 Years of Service

KARANGALPADY

MANGALORE- 575 003

Ph. : 2493633 (O)
2212723 (R)
M. : 9448260225

Wholesale & Retail Dealers in
2 & 3 WHEELERS SPARES & ACCESSORIES

Prop. : Ln. K. HARSHA KUMAR

# ಅಪಾರಕೀರ್ತಿ ಗಳಿಸಿ



ಶ್ರೀ ಶಾಂತರಾಮ ರಾವ್ ಮತ್ತು ಶ್ರೀಮತಿ ರಮ್ಯಾ ರಾವ್ ಇವರ ಸುಪುತ್ರಿ **ಕು| ಶರಣ್ಯ ಎಸ್. ರಾವ್** ಈ ಬಾರಿಯ ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯ ನಡೆಸಿದ ಸೀನಿಯರ್ ಭರತನಾಟ್ಯ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಮಂಗಳೂರಿನ ಶಾರದಾ ವಿದ್ಯಾಲಯದ 10ನೇ ತರಗತಿ ವಿದ್ಯಾರ್ಥಿನಿಯಾಗಿದ್ದು, ಕದ್ರಿ ನೃತ್ಯ ವಿದ್ಯಾನಿಲಯದ ವಿದ್ವಾನ್ ಯು. ಕೆ. ಪ್ರವೀಣ್ ಮತ್ತು ಶ್ರೀಮತಿ ಉಷಾ ಪ್ರವೀಣ್ ಇವರ ಶಿಷ್ಯೆ. ಇವಳು ಇತ್ತೀಚೆಗೆ ರಂಗಪ್ರವೇಶವನ್ನು ಮಂಗಳೂರಿನ 'ಪುರಭವನ'ದಲ್ಲಿ ನಡೆಸಿದ್ದಾಳೆ.



ಶ್ರೀ ರಾಮಕೃಷ್ಣ ಉಬರಳೆ ಮತ್ತು ಶ್ರೀಮತಿ ಅಶ್ವಿನಿ ಇವರ ಸುಪುತ್ರಿ **ಕು| ಭಾಗ್ಯಶ್ರೀ** ಈ ಬಾರಿಯ ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯ ನಡೆಸಿದ ಸೀನಿಯರ್ ಭರತನಾಟ್ಯ ಪರೀಕ್ಷೆಯಲ್ಲಿ ಶೇ. 81.8 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ.



ಬಾರಕೂರು ಕುಮಾರಸ್ವಾಮಿ ಬಿ. ಆರ್. ಮತ್ತು ಶ್ರೀಮತಿ ಸವಿತಾ ಎರ್ಮಾಳು ಇವರ ಪುತ್ರಿ **ಕು| ನಮನಾ ಬಿ. ಕೆ.** ಈ ಬಾರಿ ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯ ನಡೆಸಿದ ಕರ್ನಾಟಕ ಸಂಗೀತ ಜೂನಿಯರ್ ಪರೀಕ್ಷೆಯಲ್ಲಿ ಶೇ. 78 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀಮತಿ ಜಯಶ್ರೀ ಭಟ್ ಇವರ ಶಿಷ್ಯೆ.



ಶ್ರೀ ಕೆ. ಅವಿನಾಶ್ ಮತ್ತು ಶ್ರೀಮತಿ ಅನಿತಾ ಇವರ ಪುತ್ರಿ **ಕು| ಕೆ. ಅನಘಾ ರಾವ್** ಈ ಬಾರಿ ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯ ನಡೆಸಿದ ಕರ್ನಾಟಕ ಸಂಗೀತ ಜೂನಿಯರ್ ಪರೀಕ್ಷೆಯಲ್ಲಿ ಶೇ. 75 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀಮತಿ ರಮ್ಯಾ ಸುಧೀರ್ ಇವರ ಶಿಷ್ಯೆ.



ಶ್ರೀ ವೈ. ಎಮ್. ಮಹೇಶ್ ಮತ್ತು ಶ್ರೀಮತಿ ನಂದನಾ ಇವರ ಪುತ್ರಿ **ಕು| ವೈ. ಎಮ್. ಅನ್ವಿತಾ** ಈ ಬಾರಿ ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯ ನಡೆಸಿದ ಕರ್ನಾಟಕ ಸಂಗೀತ ಜೂನಿಯರ್ ಪರೀಕ್ಷೆಯಲ್ಲಿ ಶೇ. 78 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀಮತಿ ವಿದ್ಯಾ ಎಸ್. ರಾವ್ ಇವರ ಶಿಷ್ಯೆ.



ಅಜ್ಜಾವರ ಶ್ರೀ ರಾಜೇಶ್ ರಾವ್ ಇವರ ಪತ್ನಿ **ಶ್ರೀಮತಿ ನಿಖಿಲಾ ಎ. ಸಿ.** ಈ ಬಾರಿ ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯ ನಡೆಸಿದ ಕರ್ನಾಟಕ ಸಂಗೀತ ಸೀನಿಯರ್ ಪರೀಕ್ಷೆಯಲ್ಲಿ ಶೇ. 84.2 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಇವರು ಶ್ರೀಮತಿ ಜಯಲಕ್ಷ್ಮೀ ಶ್ರೀನಾಥ್ ಇವರ ಶಿಷ್ಯೆ.



ಶ್ರೀ ಪ್ರಸಾದ್ ರಾವ್ ಮತ್ತು ಶ್ರೀಮತಿ ನೀತಾ ಪ್ರಸಾದ್ ಇವರ ಪುತ್ರಿ **ಕು| ಶ್ರೇಷ್ಠ** ಈ ಬಾರಿ ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯ ನಡೆಸಿದ ಕರ್ನಾಟಕ ಸಂಗೀತ ಜೂನಿಯರ್ ಪರೀಕ್ಷೆಯಲ್ಲಿ ಶೇ. 81 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀಮತಿ ನೀತಾ ಪ್ರಸಾದ್ ಇವರ ಶಿಷ್ಯೆ.




ಪುತ್ತೂರಿನ ಕೊಂಬೆಟ್ಟು ಶ್ರೀಮತಿ ಸುಪ್ರಿತಾ ಮತ್ತು ಶ್ರೀ ಶ್ರೀಧರ್ ಅವರ ಮಗಳು **ಕು| ಶ್ರಿಯಾ** ಅವಳು ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯದ ಕಿರಿಯ ಶ್ರೇಣಿಯ ಕರ್ನಾಟಕ ಶಾಸ್ತ್ರೀಯ ಸಂಗೀತದ ಪರೀಕ್ಷೆಯಲ್ಲಿ ಶೇ. 92.75 ಅಂಕಗಳನ್ನು ಪಡೆದು ಉನ್ನತಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾಳೆ. ಈಕೆ ತನ್ನ ತಾಯಿಯ ಮಾರ್ಗದರ್ಶನದಲ್ಲಿ ಸಂಗೀತ ಅಭ್ಯಾಸ ಮುಂದುವರಿಸಿದ್ದಾಳೆ.



ಅಜ್ಜಾವರ ಶ್ರೀ ರವೀಶ ರಾವ್ ಇವರ ಪತ್ನಿ **ಶ್ರೀಮತಿ ರೂಪ ರಾವ್** ಈ ಬಾರಿ ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯ ನಡೆಸಿದ ಕರ್ನಾಟಕ ಸಂಗೀತ ಸೀನಿಯರ್ ಪರೀಕ್ಷೆಯಲ್ಲಿ ಶೇ. 84 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಇವರು ಶ್ರೀಮತಿ ಜಯಲಕ್ಷ್ಮೀ ಶ್ರೀನಾಥ್ ಇವರ ಶಿಷ್ಯೆ.

## ಪುತ್ತೂರಿನ ಹಿರಿಯ ನಾಗರಿಕರ ಹಾಗೂ ವಿಶೇಷ ಚೇತನರ ವಸತಿ ನಿಲಯ 'ಶಿವಸದನ'ಕ್ಕೆ ದೇಣಿಗೆ



ಬೆಂಗಳೂರಿನ ಜಸ್ಟೀಸ್ ಶ್ರೀ ಎನ್. ಡಿ. ಕೃಷ್ಣರಾವ್ ಮೆಮೋರಿಯಲ್ ಟ್ರಸ್ಟ್, ಬೆಂಗಳೂರು ಇದರ ಪರವಾಗಿ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ರವೀಂದ್ರನಾಥ್ ರಾವ್ ಬೆಳ್ಳೆ ಹಾಗೂ ಕಾರ್ಯದರ್ಶಿ ಶ್ರೀಮತಿ ಅನುರಾಧ ಅಬ್ರಹಾಂ ಮತ್ತು ಟ್ರಸ್ಟಿನ ಎಲ್ಲಾ ಸದಸ್ಯರ ಸಹಕಾರದಿಂದ ರೂ. **30,000/-**ವನ್ನು ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಹಾಗೂ ವಿಶೇಷಚೇತನರ ವಸತಿ ನಿಲಯ 'ಶಿವಸದನ'ಕ್ಕೆ ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತ ಧನ್ಯವಾದಗಳು. ಈ ಮೊದಲು ಈ ಟ್ರಸ್ಟಿನಿಂದ ರೂ. **1,50,000/-** 'ಶಿವಸದನ'ಕ್ಕೆ ದೇಣಿಗೆ ನೀಡಿದ್ದು, ಒಟ್ಟು ರೂ. **1,80,000/-** (₹ ಒಂದು ಲಕ್ಷದ ಎಂಬತ್ತು ಸಾವಿರ) ನೀಡಿದಂತಾಗಿದೆ.







Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher : Dr. A. P. Krishna, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*

*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*